**<u>ದಿನಾಂಕಃ 21-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದಃ</u>**

6. ಮೇಲ್ಮನವಿಯನ್ನು ಓ.ಎಸ್ ನಂಃ 329/2009 ರಲ್ಲಿಯ ತೀರ್ಪಿನ ವಿರುದ್ಧ ದಾಖಲಿಸಿದ್ದೇನೆ ಎಂದರೆ ನಿಜ. ಸದರಿ ತೀರ್ಪಿನ ವಿರುದ್ಧ ನಾವು ಇದೇ ನ್ಯಾಯಾಲಯದಲ್ಲಿ ಆರ್.ಎ ನಂಃ 16/2011 ನೇದ್ದನ್ನು ಸಲ್ಲಿಸಿದ್ದೆವು ಎಂದರೆ ನಿಜ. ಸದರಿ ಅಪೀಲು ದಿಃ 07-12-2012 ರಂದು ವಜಾ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಅಪೀಲಿನಲ್ಲಿ ನಾನು 4 ನೇಯ ಮೇಲ್ಮನವಿದಾರಳಿದ್ದು, ನನಗೆ ಎಲ್ಲಾ ವಿಷಯಗಳು ಗೊತ್ತಿವೆ ಎಂದರೆ ಸರಿಯಲ್ಲ . ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಆರ್ ಎ ನಂಃ 16/2011 ರಲ್ಲಿ ಆಗಿರುವ ಆದೇಶದ ವಿರುದ್ಧ ನೀವು ಯಾವುದೇ ಅಪೀಲು ಮಾಡಿಲ್ಲ ಎಂದರೆ ಸಾಕ್ಷಿಯು ಅದರ ಕುರಿತು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. 9 ವರ್ಷ 83 ದಿನಗಳ ವಿಳಂಬದ ಕುರಿತು ಸರಿಯಾದ ಮಾಹಿತಿ ನೀಡಿಲ್ಲ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಮೇಲ್ಮನವಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ .

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.